||. ನಂಜನಗೂಡಿನಲ್ಲಿರುವ ಹರಿಜನ ಗಿರಿಜನ ಹೆಣ್ಣುಮಕ್ಕಳ ವಸತಿ ಪ್ರೌಢಶಾಲೆಯಲ್ಲಿ ಕನಿಷ್ಟ ಸೌಲಭ್ಯಗಳಿಲ್ಲದೆ ತೊಂದರೆಯಾಗಿರುವುದು

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ನಂಜನಗೂಡಿನಲ್ಲಿರುವ ಹರಿಜನಗಿರಿಜನ ಹೆಣ್ಣುಮಕ್ಕಳ ವಸತಿ ಪ್ರೌಢಶಾಲೆಯಲ್ಲಿ ಕನಿಷ್ಟ ಸೌಲಭ್ಯಗಳಿಲ್ಲದೆ ತೊಂದರೆಯಾಗಿರುವ ವಿಷಯದ ಬಗ್ಗೆ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

೧. ರಾಜ್ಯದಲ್ಲಿ ಪ್ರಸ್ತ ವಿಭಾಗದಲ್ಲಿ ಒಂದರಂತೆ ೧೯೮೩ರಲ್ಲಿ ಆರಂಭಿಸಿದ ನಾಲ್ಕು ಬಾಲಕಿಯರ ವಸತಿ ಶಾಲೆಗಳಲ್ಲಿ ನಂಜನಗೂಡು, ಮಾಯಕೊಂಡ, ಬಾಗಲಕೋಟೆ ಮತ್ತು ಗುಲ್ಬರ್ಗಾ ಸೇರಿವೆ.

೨. ಬಾಗಲಕೋಟೆಯನ್ನು ಬಿಟ್ಟರೆ ಇತರ ಮೂರು ಜಾಗಗಳಲ್ಲಿ ವಸತಿ ಶಾಲೆಗೆ ತನ್ನದೇ ಕಟ್ಟಡ ಇಲ್ಲದೆ, ಅವಶ್ಯಕ ಸವಲತ್ತುಗಳನ್ನೂ ಒದಗಿಸಲು ಆಗಿರಲಿಲ್ಲ.

೩. ಈ ಶಾಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಕೆಳಕಂಡಂತೆ ಹಣ ಒದಗಿಸಲಾಗಿದೆ :

೧೯೮೪-೮೫	೫೦,೫೯,೨೩೭ ರೂ.ಗಳು
೧೯೮೫-೮೬	೧೫೦,೧೯,೦೦೦ ರೂ.ಗಳು
೧೯೮೬-೮೭	೨೯,೩೪,೦೦೦ ರೂ.ಗಳು

ಇದರಲ್ಲಿ ಮಕ್ಕಳ ಊಟ ವ್ಯವಸ್ಥೆ, ಉಡುಪು, ಬಾಡಿಗೆ, ಶಿಕ್ಷಕರ ಮತ್ತು ಸಿಬ್ಬಂದಿ ವರ್ಗದ ವೇತನ ಸೇರಿವೆ.

೪. ನಂಜನಗೂಡಿನಲ್ಲಿ ನಿವಾಸಿ ಶಾಲೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಶಾಲೆಯು ವಿದ್ಯಾರ್ಥಿಗಳಿಗೆ ಊಟ, ಉಡುಪು, ಸರಿಯಾಗಿ ಒದಗಿಸುತ್ತಿದ್ದು ಇದರ ಬಗ್ಗೆ ಯಾವುದೇ ತೊಂದರೆ ಆಗಿಲ್ಲ. ಆದರೆ ವಸತಿ ಕಟ್ಟಡದಲ್ಲಿ ಸ್ಥಳಾಭಾವದಿಂದ ಸೂಕ್ತಮಟ್ಟದ ಸವಲತ್ತುಗಳನ್ನು ಒದಗಿಸಲಾಗಿಲ್ಲದೆ ಇರುವುದು ಸರ್ಕಾರದ ಗಮನಕ್ಕೂ ಬಂದಿದೆ.

೫. ನಂಜನಗೂಡು ಶಾಲೆಯಲ್ಲಿನ ೭೪ ಮಕ್ಕಳಿಗೆ ಸ್ಥಳಾವಕಾಶ ಹೆಚ್ಚಿಸಿ, ಉತ್ತಮ ಆರೋಗ್ಯಕರ ವಾತಾವರಣ, ಸ್ನಾನ ಮತ್ತು ಶೌಚಗೃಹಗಳು, ಓದಲು ಮತ್ತು ವಿಶ್ರಮಿಸಲು ಸವಲತ್ತು ಇವುಗಳನ್ನು ಕೂಡಲೇ ಒದಗಿಸುವುದು ಸರ್ಕಾರದ ಉದ್ದೇಶ. ನಿವೇಶನದ ಅಭಾವದಿಂದ ಕಟ್ಟಡ ನಿರ್ಮಾಣ ಸಾಧ್ಯವಿಲ್ಲವಾಗಿದ್ದರೂ, ಮೊದಲನೆ ಹೆಜ್ಜೆಯಾಗಿ ಇರುವ ಕಟ್ಟಡದಲ್ಲಿಯೇ ಸವಲತ್ತುಗಳನ್ನೂ ಸುಧಾರಿಸಲು ಮತ್ತು ಬಾಡಿಗೆಗೆ ಇತರ ಕಟ್ಟಡಗಳನ್ನು ಪಡೆಯಲೂ ಆಧ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಹೆಚ್ಚಿನ ಬಜೆಟ್ ಒದಗಿಸಿರುವುದನ್ನು ಮಾನ್ಯ ಶಾಸಕರ ಗಮನಕ್ಕೆ ತರಲಾಗಿದೆ.

೬. ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ಸ್ವಂತ ಕಟ್ಟಡ ಆಗತ್ಯವಿದ್ದು ಅದಕ್ಕಾಗಿ ಭೂ ಸ್ವಾಧೀನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದು ದೀರ್ಘಾವಧಿ ಕಾರ್ಯಕ್ರಮವಾಗಿದ್ದು, ತಕ್ಷಣದ ಆಗತ್ಯವಾದ ಹೆಚ್ಚಿನ ಸ್ಥಳ, ಸ್ನಾನ ಮತ್ತು ಶೌಚಗೃಹಗಳು, ವಸತಿ ನಿಲಯದ ಸೌಕರ್ಯಗಳು ಮತ್ತು ಆರೋಗ್ಯ ವಾತಾವರಣ ನಿರ್ಮಿಸಲು ಕೂಡಲೇ ಕ್ರಮಕೈಗೊಳ್ಳಲಾಗುವುದು.

ಶ್ರೀ ಡಿ. ಟಿ. ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೆ, ನಂಜನಗೂಡಿನಲ್ಲಿ ನಿವಾಸಿ ಶಾಲೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ, ಶಾಲೆಯ ವಿದ್ಯಾರ್ಥಿಗಳಿಗೆ ಊಟ, ಉಡುಪು ಸರಿಯಾಗಿ ಒದಗಿಸುತ್ತಿದ್ದು ಇದರ ಬಗ್ಗೆ ಯಾವುದೇ ತೊಂದರೆ ಆಗಿಲ್ಲ ಎಂಬ ವಿಚಾರವನ್ನು ಹೇಳಿದ್ದಾರೆ. ಬಹುಶಃ ಅಧಿಕಾರಿಗಳು ಕೊಟ್ಟ ಈ ಉತ್ತರ ಸತ್ಯಾಂಶಕ್ಕೆ ದೂರವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಕಳೆದಸಾರಿ ಕೂಡ ಗಮನ ಸೆಳೆಯುವ ಸೂಚನೆಯಲ್ಲಿ ಈ ಪ್ರಶ್ನೆ ನಾನು ಹಾಕಿದ್ದೆ. ಐದಾರು ತಿಂಗಳು ಕಳೆದರೂ ಕೂಡ ಊಟ ಮಾಡುವುದಕ್ಕೆ ಇಲ್ಲದೆ ಅಲ್ಲಿ ವಿದ್ಯಾರ್ಥಿಗಳು ಉಪವಾಸ ಇದ್ದಾರೆ. ನಾನು ಈ ಸಭೆಗೆ ಬರುವುದಕ್ಕೆ ಮುಂಚೆ ಸೊಸೈಟಿಗೆ ಹೋಗಿ ನಾನು ಗ್ಯಾರಂಟಿ ನಿಂತು ರೇಷನ್ ಕೊಡಿಸಿ ಬಂದಿದ್ದೇನೆ. ಆದರೆ ಅಧಿಕಾರಿಗಳು ಸರಿಯಾಗಿ ಊಟ, ಉಡುಪು ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಜೊತೆಗೆ ಮಕ್ಕಳಿಗೆ ಪಠ್ಯಪುಸ್ತಕಗಳು ಕೂಡ ಕೊಟ್ಟಿಲ್ಲ. ಶಾಲೆ ಪ್ರಾರಂಭವಾಗಿ ಎರಡು ತಿಂಗಳಾದರೂ ಒಬ್ಬ ಹೆಣ್ಣುಮಗಳಿಗೂ ಕೂಡ ಪಠ್ಯಪುಸ್ತಕ ಒದಗಿಸಿಲ್ಲ. ಸರಿಯಾದ ನೀರಿಲ್ಲ. ಸರಿಯಾದ ಬೆಳಕಿಲ್ಲ. ಉಳಿದುಕೊಳ್ಳುವುದಕ್ಕೆ ಸರಿಯಾದ ಸ್ಥಳ ಇಲ್ಲ. ಗಮನ ಸೆಳೆಯುವ ಪ್ರಶ್ನೆ

ಉದ್ಭವಿಸಬೇಕಾದರೆ ತೊಂದರೆಯಿರುವುದರಿಂದ ತಾನೆ ? ಅಧಿಕಾರಿಗಳು ವಿರೋಧಪಕ್ಷದಿಂದ ಬಂದರೆ ಮಾತ್ರ ಅವರಿಗೆ ಸರಿಯಾಗಿ ಉತ್ತರ ಕೊಡುತ್ತಾರೆಯೇ ಹೊರತು ಆಡಳಿತ ಪಕ್ಷದಿಂದ ಪ್ರಶ್ನೆ ಬಂದರೆ ನಿರ್ಲಕ್ಷ್ಯ ಮಾಡುತ್ತಾರೆ. ನಾವು ಸೌಮ್ಯವಾಗಿ ಕೇಳುತ್ತೇವೆ, ವಿರೋಧಪಕ್ಷದವರ ತರಹ ಗಲಾಟೆ ಮಾಡುವುದಿಲ್ಲ ಎಂದು ನಿರ್ಲಕ್ಷ್ಯ ಮಾಡುತ್ತಾರೆ. ಐದು ತಿಂಗಳಾದರೂ ರೇಷನ್ ಇಲ್ಲದೆ ವಿದ್ಯಾರ್ಥಿಗಳು ಉಪವಾಸದಿಂದಿದ್ದಾರೆ. ಅಧಿಕಾರಿಗಳು ದುಡ್ಡು ರಿಲೀಸ್ ಮಾಡಿಲ್ಲ. ಉತ್ತರದಲ್ಲಿ ಎಲ್ಲಾ ಸರಿಯಾಗಿದೆ ಎಂದು ಕೊಡುತ್ತಾರೆ. ಕುಡಿಯುವುದಕ್ಕೆ ನೀರಿಲ್ಲ. ಸ್ನಾನಕ್ಕೆ ಸ್ಥಳ ಇಲ್ಲ. ವಿದ್ಯುಚ್ಛಕ್ತಿ ಇಲ್ಲ. ಲೈಟ್ ಬಿಲ್ ಕಟ್ಟುವುದಕ್ಕೂ ಹಣ ಇಲ್ಲದೆ ನಾವು ಹೋಗಿ ಕಾನೂನು ಪ್ರಕಾರ ಅಲ್ಲದಿದ್ದರೂ ಏನೋ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಇಷ್ಟರಮಟ್ಟಿಗೆ ಅಧಿಕಾರಿಗಳು ನಡೆದುಕೊಂಡರೆ ಬಹಳ ಕಷ್ಟವಾಗುತ್ತದೆ. ಮಕ್ಕಳಿಗೆ ಸೌಕರ್ಯ ಕೊಡುವುದಕ್ಕಾಗದಿದ್ದರೆ ಅಥವಾ ಹಾಸ್ಟೆಲ್ ಕ್ಲೋಸ್ ಮಾಡಲಿ. ೭ಳ ಜನ ಹೆಣ್ಣುಮಕ್ಕಳಿದ್ದಾರೆ. ೧೦-೨೦ ಅಡಿ ಜಾಗದಲ್ಲಿ ೭ಳ ಜನ ಮಕ್ಕಳು ಮಲಗಿಕೊಳ್ಳಬೇಕು. ಕಟ್ಟಡವನ್ನು ನಿಧಾನವಾಗಿ ಮಾಡಲಿ. ಆದರೆ ಕನಿಷ್ಟ ಸೌಲಭ್ಯವನ್ನಾದರೂ ಅವರಿಗೆ ಕೊಡದೇಹೋದರೆ ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇವತ್ತೇ ಸೂಕ್ತ ಕ್ರಮ ತೆಗೆದುಕೊಂಡು ತಕ್ಷಣ ಹಣ ಮಂಜೂರು ಮಾಡಬೇಕು. ಅಥವಾ ಹಣ ರಿಲೀಸ್ ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಶಾಸಕರಿಗೆ ಒಂದು ಭರವಸೆಯನ್ನು ಕೊಡುತ್ತೇನೆ. ಈ ಅಧಿವೇಶನ ಮುಗಿದ ಮೇಲೆ ನಾನೇ ಖುದ್ದಾಗಿ ಹೋಗುತ್ತೇನೆ. ಅಧಿಕಾರಿಗಳು ನಿರ್ಲಕ್ಷ್ಯದಿಂದ ಸರಿಯಾಗಿ ಕೆಲಸ ಮಾಡಿದ್ದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ರೇಷನ್ ಪರ್ಚೇಸ್ ಮಾಡುವುದಕ್ಕೆ ಹಣ ಬಿಡುಗಡೆ ಮಾಡುವುದಕ್ಕೆ ಆದೇಶ ನೀಡಿ. ಈಗಾಗಲೇ ೯ ಸಾವಿರ ರೂಪಾಯಿಗಳ ಸಾಲ ಮಾಡಿದ್ದಾರೆ. ಆದ್ದರಿಂದ ಸಾಲ ಇದೆ, ರೇಷನ್ ಕೊಡುವುದಿಲ್ಲ ಎಂದು ಸೊಸೈಟಿಯವರು ಹೇಳುತ್ತಾರೆ. ನಾನು ಗ್ಯಾರಂಟಿ ನಿಂತು ರೇಷನ್ ಕೊಡಿಸಿದ್ದೇನೆ. ೭-೮ ದಿವಸದಲ್ಲಿ ಹಣ ಕೊಡಿಸದೇಹೋದರೆ ಅಲ್ಲಿ ಮಕ್ಕಳು ಉಪವಾಸ ಇರಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇವೊತ್ತೇ ಹಣ ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ನಿನ್ನೆ ದಿವಸವೇ ಈ ಬಗ್ಗೆ ಅಧಿಕಾರಿಗಳಿಗೆ ಆದೇಶ ನೀಡಿದ್ದೇನೆ. ತಕ್ಷಣವೇ ಏನಾದರೂ ವ್ಯವಸ್ಥೆ ಮಾಡಿ ಎಂಬುದಾಗಿಯೂ ತಿಳಿಸಿದ್ದೇನೆ. ಅಧಿವೇಶನ ಮುಗಿದಮೇಲೆ ನಾನೇ ಖುದ್ದು ನೋಡಿ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇನೆ.

(iii) ಪದವಿಪೂರ್ವ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳನ್ನು ಪುನರ್ ವಿಮರ್ಶೆ ಮಾಡಿರುವುದು.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಪದವಿಪೂರ್ವ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳನ್ನು ಪುನರ್ ವಿಮರ್ಶೆ ಮಾಡಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯವು ಬಿ.ಎಸ್.ಸಿ. ಪರೀಕ್ಷಾ ಫಲಿತಾಂಶ ಪ್ರಕಟಿಸುವಲ್ಲಿ ೧೯೮೫ರಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ ನಿರ್ಣಯದಂತೆ ಪೇಪರ್ ಮಿನಿಮಂ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಿತು.

ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ದಿನಾಂಕ ೩೧-೭-೮೬ರಂದು ನಡೆಸಿದ ತನ್ನ ಸಭೆಯಲ್ಲಿ ಸಬ್ಜೆಕ್ಟ್ ಮಿನಿಮಂ ಗಣನೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು. ಆದ್ದರಿಂದ ಹೊಸ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಪದವಿ ಪೂರ್ವ ಶಿಕ್ಷಣದ ಫಲಿತಾಂಶಗಳಿಗೆ ಸಂಬಂಧಿಸಿದಂತೆ, ಫಲಿತಾಂಶಗಳ ಪ್ರಕಟಣೆ ನಂತರ ಪುನರ್ ಮೌಲ್ಯಮಾಪನಕ್ಕೆ ಅವಕಾಶವಿಲ್ಲ. ಅಂಥ ಗೊಂದಲ ಏನೂ ಆಗಿಲ್ಲ. ಬಿ.ಎಸ್ಸಿ, ಪರೀಕ್ಷೆಯಲ್ಲಿ ಮಾತ್ರ ಸ್ವಲ್ಪ ಗೊಂದಲವಾಗಿದೆ. ಅದನ್ನು ಸರಿಪಡಿಸುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ವಿದ್ಯಾ ಇಲಾಖೆ ಮಹಮ್ಮದ್-ಬಿನ್-ತೊಗಲಕ್ ದರ್ಬಾರಿನ ರೀತಿಯಲ್ಲಿ ನಡೆಯುತ್ತಿದೆ. ನಾನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದರೆ, ಅವರು ನನಗೆ ೩೩ಳಿರ ನಿಯಮದ ಮೇರೆಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ನೋಡಿದರೆ, ವಿದ್ಯಾ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ? ಯಾವ ಮಟ್ಟಕ್ಕೆ ಇಳಿದಿದೆ ಎಂದು ತಿಳಿದುಕೊಳ್ಳಬಹುದು.